PURAVANKARA

06.09.2023

To,

| The General Manager – DCS, | The Manager, |
|---|---|
| Listing Operations-Corporate Services Dept.<br>BSE Ltd.<br>1st Floor, New Trading Ring, Rotunda Building, 'P J. Towers, Dalal Street, Fort,<br>**Mumbai 400 001.**<br><br>corp.relations@bseindia.com<br>**Stock Code: 532891** | Listing Department,<br>National Stock Exchange of India Ltd.,<br>Exchange Plaza, 5th Floor, Plot No. C/1, G Block, Bandra-Kurla Complex, Bandra (E), **Mumbai**<br><br>cc_nse@nse.co.in<br>**Stock Code: PURVA** |

Dear Sir / Madam,

**Sub: Notice of the 37th (Thirty Seventh) Annual General Meeting and e-Voting information**

**Ref: Regulation 47 of the SEBI (Listing Obligations and Disclosure Requirements) Regulations, 2015**

We write to inform you that we have published the notice of the 37th Annual General Meeting of the Company to be held on Friday, 29th September 2023 at 02:00 P.M. (IST) in “Financial Express” (English Newspaper) titled: “Notice of the 37th Annual General Meeting and e-voting information.” and in “Vijay Karnataka”.

This is for your information and records.

Thanking you,

Yours sincerely,

**For Puravankara Limited**

SUDIP CHATTERJEE

Digitally signed by SUDIP CHATTERJEE
DN: c=IN, o=PERSONAL, pseudonym=6f4c2521f1863e3559fee23d58a90d5e, 2.5.4.20=E1A35BB438B1685F86518187336DB78F880C44230601766F800DC3F49C5B8C23, postalCode=700091, st=WEST BENGAL, serialNumber=39429ab379439a3bacfadd28e74d9dfc95347eb64c97c1f49bf9992a18a3e44e, cn=SUDIP CHATTERJEE
Date: 2023.09.06 17:52:17 +05'30'

**(Sudip Chatterjee)**
**Company Secretary**
**Membership No.: F11373**

## ಸಾಮಾನ್ಯ ಯುಗ (Common Era)

ಅಂತಾರಾಷ್ಟ್ರೀಯವಾಗಿ ಬಳಕೆಯಲ್ಲಿರುವ ಗ್ರೆಗೊರಿಯನ್ ಕ್ಯಾಲೆಂಡರ್ ಕ್ರಿಸ್ತನ ಜನ್ಮ ದಿನಾಂಕವನ್ನು ಆಧರಿಸಿದೆ. 2023ನೇ ಇಸವಿಗೂ ಮೊದಲಿನ ವರ್ಷಗಳನ್ನು ಬಿಸಿ ಅಂದರೆ ಬಿಫೋರ್ ಕ್ರೈಸ್ಟ್ ಎಂದೂ ನಂತರದ ವರ್ಷಗಳನ್ನು ಎಡಿ ಅಂದರೆ, ಆ್ಯನೊ ಡಾಮಿನೈ ಎಂದೂ ಗುರುತಿಸಲಾಗುತ್ತದೆ. ಇದನ್ನು ಕನ್ನಡದಲ್ಲಿ ಕ್ರಿಸ್ತ ಪೂರ್ವ ಹಾಗೂ ಕ್ರಿಸ್ತ ಶಕ ಎಂದು ಬರೆಯಲಾಗುತ್ತದೆ. ಆದರೆ, ಧಾರ್ಮಿಕ ತಟಸ್ಥತೆಯನ್ನು ಸಾಧಿಸುವ ಉದ್ದೇಶದಿಂದ ಇದಕ್ಕೆ ಪರ್ಯಾಯವಾದ ಯುಗ ಗಣನೆಯೂ ಇದೆ. ಅದರ ಪ್ರಕಾರ 2023ನೇ ಇಸವಿಗೂ ಮುಂಚಿನ ವರ್ಷಗಳನ್ನು ಬಿಸಿಇ ಅಂದರೆ ಬಿಫೋರ್ ಕಾಮನ್ ಎರ(ಸಾಮಾನ್ಯ ಯುಗಕ್ಕೂ ಮುನ್ನ) ಎಂದೂ, ನಂತರದ ವರ್ಷಗಳನ್ನು ಕಾಮನ್ ಎರ(ಸಾಮಾನ್ಯ ಎರ) ಎಂದೂ ಗುರುತಿಸಲಾಗುತ್ತದೆ. ಅಂದರೆ, ವರ್ತಮಾನವು ಸಾಮಾನ್ಯ ಯುಗವಾಗಿದೆ.

2023

ವಿಕ ಅರಿವು

# ನೀರು, ಆಹಾರವಿಟ್ಟು ಕಾಡು ಪ್ರಾಣಿ ದಾಳಿ ತಡೆಯಿರಿ

### ಅರಣ್ಯಾಧಿಕಾರಿಗಳಿಗೆ ಸಿಎಂ ಸೂಚನೆ | ಅರಣ್ಯದಂಚಿನಲ್ಲಿ ಅಕ್ರಮ ಗಣಿಗಾರಿಕೆ ನಿರ್ಬಂಧಿಸಿ | ಅರಣ್ಯ ಒತ್ತುವರಿ ತೆರವಿಗೆ ಕಾರ್ಯಾಚರಣೆಗೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ಜೀವ ಹಾನಿ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಸಿಎಂ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದ್ದು, ವನ್ಯಜೀವಿಗಳು ವಿಶೇಷವಾಗಿ, ಆನೆಗಳು ನಾಡಿಗೆ ನುಗ್ಗುವುದನ್ನು ತಡೆಯಲು ಅರಣ್ಯದೊಳಗೆ ಅಗತ್ಯ ಪ್ರಮಾಣದ ಆಹಾರ ಮತ್ತು ನೀರು ಲಭ್ಯವಾಗುವಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಕಟ್ಟಪ್ಪಣೆ ಮಾಡಿದ್ದಾರೆ.

ರಾಜ್ಯದಲ್ಲಿ ಕಳೆದ 2 ವಾರಗಳಿಂದೀಚೆಗೆ ಆನೆ ದಾಳಿಯಿಂದ 11 ಮಂದಿ ಮೃತಪಟ್ಟಿದ್ದು, ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕಲ್ಲಹಟ್ಟಿದಲ್ಲಿ ಕೃಷ್ಣ ನಾಯಕ್ ಎಂಬ ಸಣ್ಣ ಬಾಲಕನನ್ನು ಹುಲಿ ಎತ್ತೊಯ್ದಿದೆ. ಈ ಆತಂಕಕಾರಿ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಿಎಂ ಮಂಗಳವಾರ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.



**ಡಿಎಫ್‌ಒಗೆ ನೋಟಿಸ್:** ಹಾಸನದಲ್ಲಿ ಅರಿವಳಿಕೆ ತಜ್ಞ ವೆಂಕಟೇಶ್ ಆನೆ ತುಳಿತಕ್ಕೆ ಬಲಿಯಾದ ಘಟನೆ ಬಗ್ಗೆ ಸಿಎಂ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ''ಗಾಯಾಳು ಆನೆಗೆ ಚಿಕಿತ್ಸೆ ನೀಡುವಾಗ ಮುನ್ನೆಚ್ಚರಿಕೆ ಕ್ರಮ ವಹಿಸಲಾಗಿತ್ತೇ?,'' ಎಂದು ಪ್ರಶ್ನಿಸಿದರು. ಹಾಸನ ಡಿಎಫ್‌ಒಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಸೂಚಿಸಿದರು.

**ಹುಲಿ ಸೆರೆಗೆ ಕಾರ್ಯಾಚರಣೆ**

''ನಾಗರಹೊಳೆ ವಲಯದ ಹೆಗ್ಗಡದೇವನ ಕೋಟೆ ಬಳಿ 7 ವರ್ಷದ ಬಾಲಕ ಚರಣ್ ನಾಯಕ್ ನನ್ನು ಹುಲಿ ಕೊಂದು ಹಾಕಿದೆ. ಹಿರಿಯ ಐಎಫ್‌ಎಸ್ ಅಧಿಕಾರಿ ಕುಮಾರ್ ಪುಷ್ಕರ್ ಅವರನ್ನು ಸ್ಥಳಕ್ಕೆ ಕಳಹಿಸಿದ್ದು, ಹುಲಿ ಸೆರೆಹಿಡಿಯಲು ಕಾರ್ಯಾಚರಣೆ ಆರಂಭವಾಗಿದೆ,'' ಎಂದು ತಿಳಿಸಿದರು.

**ಸಚಿವರ ಬೇಡಿಕೆ:** ''ರಾಜ್ಯದಲ್ಲಿ ಆನೆಗಳ ದಾಳಿಯಿಂದ ಕಳೆದ ಐದೂವರೆ ವರ್ಷಗಳಲ್ಲಿ 148 ಜನರು ಮೃತಪಟ್ಟಿದ್ದು, ಇತ್ತೀಚೆಗೆ ಈ ಪ್ರಮಾಣ ಹೆಚ್ಚುತ್ತಿದೆ. ಆನೆಗಳು ನಾಡಿಗೆ ಲಗ್ಗೆ ಇಡದಂತೆ ತಡೆಯಲು ರೈಲ್ವೆ ಬ್ಯಾರಿಕೇಡ್, ಸೌರ ತಂತಿ ಬೇಲಿ ಹಾಗೂ ಆನೆ ಕಂದಕ ತೋಡುವ ಉದ್ದೇಶಕ್ಕೆ 500 ಕೋಟಿ ರೂ. ಹೆಚ್ಚಿನ ಅನುದಾನ ನೀಡಬೇಕು,'' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಈ ಸಂದರ್ಭದಲ್ಲಿ ಮನವಿ ಮಾಡಿದರು.

ಈ ಕೋರಿಕೆಗೆ ಪ್ರತಿಕ್ರಿಯಿಸಿದ ಸಿಎಂ, ''ರೈಲ್ವೆ ಹಳಿಯ ತಡೆಗೋಡೆ ನಿರ್ಮಾಣ ಯೋಜನೆಗೆ ಹಿಂದಿನ ಬಾಕಿ 54 ಕೋಟಿ ರೂ. ಜತೆಗೆ, 100 ಕೋಟಿ ಒದಗಿಸಲಾಗಿದೆ. ಈ ಹಣವನ್ನು ವೆಚ್ಚ ಮಾಡಿದ ಬಳಿಕ ಹಣಕಾಸಿನ ಲಭ್ಯತೆ ನೋಡಿಕೊಂಡು ಹೆಚ್ಚುವರಿ ಬಿಡುಗಡೆಗೆ ಕ್ರಮ ವಹಿಸಲಾಗುವುದು'' ಎಂದು ಭರವಸೆ ನೀಡಿದರು. ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಹಿರಿಯ ಅಧಿಕಾರಿಗಳಾದ ರಾಜೀವ್ ರಂಜನ್, ಸುಭಾಷ್ ಮಾಲ್ಕಡೆ, ಸಂಜಯ್ ಬಿಜ್ಜೂರ್, ಶಾಶ್ವತಿ ಮತ್ತಿತರರು ಸಭೆಯಲ್ಲಿದ್ದರು.

**ಗಣಿಗಾರಿಕೆ ನಿರ್ಬಂಧ**

ವಿಕಾಸಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಈಶ್ವರ ಖಂಡ್ರೆ, ''ಕಾಡಂಚಿನಲ್ಲಿ ಕಲ್ಲು ಗಣಿಗಾರಿಕೆಯ ಶಬ್ದದಿಂದ ವನ್ಯ ಮೃಗಗಳು ಜನವಸತಿ ಪ್ರದೇಶಗಳತ್ತ ನುಗ್ಗುತ್ತಿವೆ ಎಂಬ ಅಭಿಪ್ರಾಯವೂ ಇದೆ. ಅರಣ್ಯದೊಳಗೆ ಅಥವಾ ಅರಣ್ಯದ ಅಂಚಿನಲ್ಲಿ ಅಕ್ರಮ ಕಲ್ಲು ಗಣಿಗಾರಿಕೆಗೆ ಯಾವುದೇ ಕಾರಣಕ್ಕೂ ಅವಕಾಶ ಇರುವುದಿಲ್ಲ. ಅಂತಹ ಗಣಿಗಾರಿಕೆ ನಡೆಯುತ್ತಿರುವುದು ಕಂಡುಬಂದರೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಈ ವಿಚಾರದಲ್ಲಿ ಅರಣ್ಯಾಧಿಕಾರಿಗಳನ್ನೇ ಹೊಣೆ ಮಾಡಿ, ಅವರ ವಿರುದ್ಧವೂ ಕ್ರಮ ಜರುಗಿಸಲಾಗುವುದು,'' ಎಂದು ಹೇಳಿದರು.

## ಶಶಿಕಲಾಗೆ ಬಂಧನ ವಾರೆಂಟ್

**ಬೆಂಗಳೂರು:** ಜೈಲು ಸಿಬ್ಬಂದಿಗೆ ಲಂಚ ನೀಡಿ ಜೈಲಿನಲ್ಲಿ ರಾಜಾತಿಥ್ಯ ಪಡೆದ ಆರೋಪ ಪ್ರಕರಣದ ವಿಚಾರಣೆಗೆ ಗೈರಾದ ಎಐಡಿಎಂಕೆ ನಾಯಕಿ ಶಶಿಕಲಾ ನಟರಾಜನ್ ಹಾಗೂ ಅವರ ಆಪ್ತೆ ಇಳವರಸಿ ಅವರಿಗೆ ಜಾಮೀನು ರಹಿತ ಬಂಧನ ವಾರೆಂಟ್ ಹೊರಡಿಸಿ ಲೋಕಾಯುಕ್ತ ನ್ಯಾಯಾಲಯ ಆದೇಶಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸೆ.4ರಂದು ಶಶಿಕಲಾ ನಟರಾಜನ್, ಇಳವರಸಿ ಗೈರಾಗಿದ್ದರು. ಹೀಗಾಗಿ, ಇಬ್ಬರಿಗೂ ವಾರೆಂಟ್ ಹೊರಡಿಸಿ ನ್ಯಾಯಾಲಯ ಆದೇಶಿಸಿತ್ತು. ಜತೆಗೆ, ಕೇಸ್‌ನ ಸಾಕ್ಷಿಗಳಿಗೆ ನೋಟಿಸ್ ಜಾರಿಗೊಳಿಸಿ ಅಕ್ಟೋಬರ್ 5ಕ್ಕೆ ವಿಚಾರಣೆ ಮುಂದೂಡಿದೆ.

## ಹಿಂದೂ ಧರ್ಮ ಯಾವಾಗ ಹುಟ್ಟಿತು?

■ **ವಿಕ ಸುದ್ದಿಲೋಕ ಕೊರಟಗೆರೆ**

ಹಿಂದೂಧರ್ಮ ಯಾವಾಗ ಹುಟ್ಟಿತು? ಯಾರು ಹುಟ್ಟುಹಾಕಿದ್ರು ಎಂಬುದೇ ಇನ್ನೂ ಪ್ರಶ್ನೆಯಾಗಿ ಉಳಿದಿದೆ.



ಹೀಗೆಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಅವರು ಶಿಕ್ಷಕ ದಿನಾಚರಣೆ ಕಾರ್ಯಕ್ರಮದಲ್ಲಿ ಹೇಳಿದರು. ''ನಮ್ಮ ದೇಶದಲ್ಲಿ ಬೌದ್ಧ ಧರ್ಮ ಮತ್ತು ಜೈನ ಧರ್ಮ ಹುಟ್ಟಿರುವ ಇತಿಹಾಸವಿದೆ. ವಿದೇಶದಿಂದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ನಮ್ಮ ದೇಶಕ್ಕೆ ಬಂದಿವೆ. ಮನುಕುಲಕ್ಕೆ ಒಳ್ಳೆಯದಾಗಿ ಎಂಬುದೇ ಪ್ರಪಂಚದ ಎಲ್ಲಾ ಧರ್ಮಗಳ ಸಾರಾಂಶ,''ಎಂದರು. ''ಪ್ರತಿವರ್ಷ 15ಲಕ್ಷ ಎಂಜಿನಿಯರ್ ಮಾನವ ಸಂಪನ್ಮೂಲ ಉತ್ಪಾದನೆ ಮಾಡುವ ದೇಶ ನಮ್ಮದು. ಪ್ರಪಂಚಕ್ಕೆ ಡಾಕ್ಟರ್ ಬೇಕಾ.. ಎಂಜಿನಿಯರ್ ಬೇಕಾ.. ಮೇಸ್ಟ್ರು ಬೇಕಾ ನಮ್ಮ ದೇಶ ಕೊಡುತ್ತೆ,'' ಎಂದರು.

### ಸನಾತನವೆಂಬುದು ಇಸಂ: ಡಾ. ಎಚ್‌ಸಿಎಂ

**ಮೈಸೂರು:** ಸನಾತನವೆಂಬುದು ಧರ್ಮವಲ್ಲ, ಇಸಂ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್‌ಸಿ. ಮಹದೇವಪ್ಪ ತಿಳಿಸಿದರು. ತಮಿಳುನಾಡು ಸಚಿವ ಉದಯನಿಧಿ ನೀಡಿರುವ ಹೇಳಿಕೆಗೆ ಬಗ್ಗೆ ಮಾತನಾಡಿ,''ಸನಾತನವೆಂಬುದು ಇಸಂ. ಅದು ಬೇರೆಯವರ ಸ್ವಾತಂತ್ರ್ಯ, ಹಕ್ಕುಗಳನ್ನು ದಮನ ಮಾಡುವಂತಾಗಬಾರದು. ಬೇರೆಯವರ ಪರಮಾಧಿಕಾರವನ್ನು ಕಸಿದುಕೊಳ್ಳಲು ಅವಕಾಶ ನೀಡುವುದಿಲ್ಲ,'' ಎಂದರು.

**'ತಮಿಳುನಾಡಿನ ವಿಷಯ ಕೇಂದ್ರೀಕರಿಸಿ ಅವರು ಹೀಗೆ ಹೇಳಿರಬಹುದು, ಈ ದೇಶದಲ್ಲಿ ಧರ್ಮದ ಆಚರಣೆ ಅವರವರಿಗೆ ಬಿಟ್ಟಿದ್ದು. ನಾವು ಒಂದು ಪಕ್ಷದಿಂದ ಜನರಿಗೆ ಈ ಧರ್ಮದಲ್ಲಿರು ಎಂದು ಹೇಳಲು ಸಾಧ್ಯವಿಲ್ಲ.**

**-ಆರ್.ಬಿ. ತಿಮ್ಮಾಪುರ್** ಸಚಿವ

## ಉದಯನಿಧಿ ವಿರುದ್ಧ ರಾಜ್ಯದಲ್ಲೂ ದೂರು

■ **ವಿಕ ಸುದ್ದಿಲೋಕ** ಬೆಂಗಳೂರು

ಸನಾತನ ಧರ್ಮದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ಬೆಂಗಳೂರು, ದಾವಣಗೆರೆಯಲ್ಲಿ ದೂರು ದಾಖಲಿಸಲಾಗಿದೆ.

''ಉದಯನಿಧಿ ಸ್ಟಾಲಿನ್ ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ನೂರು ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಸನಾತನ ಧರ್ಮೀಯ ಸಮುದಾಯವನ್ನೇ ನಾಶ ಮಾಡುವಂತೆ ಕರೆ ಕೊಟ್ಟಿರುವ ಅವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಅವರು ಬನಶಂಕರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

''ಸನಾತನ ಹಿಂದೂ ಧರ್ಮೀಯ ಸಮುದಾಯದ ಮಾರಣಹೋಮಕ್ಕೆ ಕರೆ ಕೊಡುವ ಮೂಲಕ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ,''ಎಂದು ದೂರಿದ್ದಾರೆ.

ದಾವಣಗೆರೆಯಲ್ಲಿ ಮಾಜಿ ಮೇಯರ್, ಬಿಜೆಪಿ ನಾಯಕ ಬಿ.ಜಿ. ಅಜಯ್‌ಕುಮಾರ್ ದೂರು ದಾಖಲಿಸಿದ್ದಾರೆ. ನಂತರ ಸುದ್ದಿಗೋಷ್ಠಿಯಲ್ಲಿ,''ಧಾರ್ಮಿಕ ಭಾವನೆಗಳಿಗೆ ಧಕ್ಕೆ, ಕೋಮು ಪ್ರಚೋದನೆ ಆಗುವಂತೆ ಮಾತನಾಡಿದ್ದಾರೆ,'' ಎಂದರು.

### ಚರ್ಚೆಗೆ ಗ್ರಾಸವಾದ ರಾಜ್ಯ ಸರಕಾರದ ನಡೆ

## 4 ಐಪಿಎಸ್ ವರ್ಗಾವಣೆಗೆ ತಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಪೊಲೀಸ್ ಇಲಾಖೆಯ 36 ಐಪಿಎಸ್ ಅಧಿಕಾರಿಗಳಿಗೆ ವರ್ಗಾವಣೆ ಭಾಗ್ಯ ಸಿಕ್ಕ ಮರುದಿನವೇ ಹೊಸದೊಂದು ಆದೇಶ ಹೊರಡಿಸಿರುವ ಸರಕಾರ, 4 ಅಧಿಕಾರಿಗಳ ವರ್ಗಾವಣೆಗೆ ಮಂಗಳವಾರ ತಾತ್ಕಾಲಿಕ ಬ್ರೇಕ್ ಹಾಕಿದೆ. ಸರಕಾರದ ವಿರುದ್ಧ ವರ್ಗಾವಣೆ ದಂಧೆಯ ಗುಸುಗುಸು ಕೇಳಿಬಂದಿರುವ ಬೆನ್ನಲ್ಲೇ ವರ್ಗಾವಣೆ ಆದೇಶ ತಡೆ ಹಿಡಿದಿರುವುದು ಸಾರ್ವಜನಿಕವಾಗಿ ಚರ್ಚೆಗೆ ಗ್ರಾಸವಾಗಿದೆ.

ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡಿದ್ದ ಸರಕಾರ ನಾಲ್ಕು ದಿನಗಳ ಹಿಂದೆಯಷ್ಟೇ 10 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿತ್ತು. ಅದರ ಬೆನ್ನಲ್ಲೇ ಸೋಮವಾರ ರಾತ್ರೋರಾತ್ರಿ 36 ಐಪಿಎಸ್ ಅಧಿಕಾರಿಗಳನ್ನು ಎತ್ತಂಗಡಿ ಮಾಡಿತ್ತು. ಮಂಗಳೂರು ಕಮಿಷನರ್, ಬೆಂಗಳೂರಿನ ವಿವಿಧ ವಿಭಾಗಗಳ ಡಿಸಿಪಿಗಳು, ವಿವಿಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿತ್ತು.

ವರ್ಗಾವಣೆಗೊಂಡ ಅಧಿಕಾರಿಗಳಿಗೆ ಸೂಚಿಸಿದ ಸ್ಥಳದಲ್ಲಿ ಮಂಗಳವಾರವೇ ಕರ್ತವ್ಯಕ್ಕೆ ಹಾಜರಾಗಬೇಕೆಂದು ಆದೇಶಿಸಲಾಗಿತ್ತು. ಅದರಂತೆ ಅಧಿಕಾರಿಗಳು ನಿಯೋಜಿತ ಕಾರ್ಯಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ, ಅಂತಿಮ ಕ್ಷಣದಲ್ಲಿ 4 ಅಧಿಕಾರಿಗಳ ವರ್ಗಾವಣೆ ತಡೆ ಹಿಡಿಯಲಾಗಿದೆ. ಜತೆಗೆ, ಆ ಅಧಿಕಾರಿಗಳಿಗೆ ಕೂಡಲೇ ಡಿಜಿ-ಐಜಿಪಿ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ಸರಕಾರ ಸೂಚನೆ ನೀಡಿದೆ.

**ಯಾವ ಅಧಿಕಾರಿಗಳಿಗೆ ತಡೆ:** 36 ಐಪಿಎಸ್ ಅಧಿಕಾರಿಗಳ ಪೈಕಿ ಅಕ್ಷಯ್ ಮಚೀಂದ್ರ, ಭೀಮಾಶಂಕರ್ ಗುಳೇದ್, ಸೈದುಲ್ಲಾ ಅಡಾವತ್ ವರ್ಗಾವಣೆಗೆ ತಾತ್ಕಾಲಿಕ ತಡೆ ನೀಡಲಾಗಿದೆ. ಜತೆಗೆ, ಸಂಜೀವ್ ಪಾಟೀಲ್ ಅವರ ವರ್ಗಾವಣೆ ತಡೆ ಹಿಡಿಯಲಾಗಿದೆ. ಸೋಮವಾರದ ಆದೇಶದಲ್ಲಿ ಬೆಳಗಾವಿಯಿಂದ ಬೆಂಗಳೂರಿನ ವೈಟ್‌ಫೀಲ್ಡ್ ವಿಭಾಗಕ್ಕೆ ವರ್ಗಾವಣೆ ಆಗಿದ್ದ ಸಂಜೀವ್ ಪಾಟೀಲ್‌ಗೆ ಮೂಮೆಂಟ್ ಆರ್ಡರ್ ಕೊಟ್ಟಿರಲಿಲ್ಲ.

**ವರ್ಗಾವಣೆಯಾದ ಅಧಿಕಾರಿಗಳ ವಿವರ**

- ಅನುಪಮ್ ಅಗರ್‌ವಾಲ್ (ಮಂಗಳೂರು ಕಮಿಷನರ್)
- ಡಾ.ಎಸ್.ಡಿ.ಶರಣಪ್ಪ(ಮೈಸೂರು ಪೊಲೀಸ್ ಅಕಾಡೆಮಿ)
- ವರ್ತಿಕಾ ಕಟಿಯಾರ್ (ಆಂತರಿಕ ಭದ್ರತಾ ವಿಭಾಗದ ಎಸ್‌ಪಿ)
- ಕೆ.ಸಂತೋಷ್ ಬಾಬು (ಬೆಂ. ನಗರ ಆಡಳಿತ ವಿಭಾಗದ ಡಿಸಿಪಿ)
- ಯತೀಶ್‌ಚಂದ್ರ (ಆಂತರಿಕ ಭದ್ರತಾ ವಿಭಾಗದ ಎಸ್‌ಪಿ)
- ಡಾ.ಭೀಮಾಶಂಕರ ಗುಳೇದ್ (ಬೆಳಗಾವಿ ಎಸ್‌ಪಿ)
- ನಿಕಂ ಪ್ರಕಾಶ್ ಅಮ್ರಿತ್ (ವೈರ್‌ಲೆಸ್ ಎಸ್‌ಪಿ)
- ರಾಹುಲ್‌ಕುಮಾರ್ ಶಹಾಪುರವಾಡ್ (ಬೆಂದಕ್ಷಿಣ ಡಿಸಿಪಿ)
- ಡಿ.ದೇವರಾಜ್ (ಬೆಂ. ಪೂರ್ವ ಡಿಸಿಪಿ)
- ಅಬ್ದುಲ್ ಅಹದ್ (ಬೆಂಗಳೂರು ಸಿಸಿಬಿ ಡಿಸಿಪಿ)
- ಎಸ್.ಗಿರೀಶ್ (ಬೆಂ. ಪಶ್ಚಿಮ ಡಿಸಿಪಿ)
- ಡಿ.ಆರ್.ಸಿರಿಗೌರಿ (ಅಗ್ನಿಶಾಮಕ ಸೇವೆಗಳ ಇಲಾಖೆ ಉಪ ನಿರ್ದೇಶಕರು)
- ಕೆ.ಪರಶುರಾಮ್ (ಗುಪ್ತಚರ ದಳದ ಎಸ್‌ಪಿ)
- ಎಚ್.ಡಿ.ಆನಂದ್‌ಕುಮಾರ್ (ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್‌ಪಿ)
- ಡಾ.ಸುಮನ್ ಡಿ.ಪನ್ನೇಕರ್ (ಪೊಲೀಸ್ ಪ್ರಧಾನ ಕಚೇರಿ ಎಐಜಿಪಿ)
- ಡೆಕ್ಕಾ ಕಿಶೋರ್ ಬಾಬು (ಕಲಬುರಗಿ ಪೊಲೀಸ್ ಶಾಲೆ ಪ್ರಾಂಶುಪಾಲ)
- ಡಾ.ಕೋನ ವಂಶಿಕೃಷ್ಣ(ಬೆಂಗಳೂರು ಕಮಾಂಡ್ ಸೆಂಟರ್ ಡಿಸಿಪಿ)
- ಲಕ್ಷ್ಮಣ್ ನಿಂಬರಗಿ (ಸ್ಟೇಟ್ ಕ್ರೈಂ ರೆಕಾರ್ಡ್ ಬ್ಯೂರೊ ಎಸ್‌ಪಿ)
- ಡಾ.ಕೆ.ಅರುಣ್ (ಉಡುಪಿ ಎಸ್‌ಪಿ)
- ಎಂ.ಎಸ್.ಮಹಮ್ಮದ್ ಸುಜೀತಾ (ಹಾಸನ ಎಸ್‌ಪಿ)
- ಜಯಪ್ರಕಾಶ್ (ಗುಪ್ತಚರ ದಳದ ಎಸ್‌ಪಿ)
- ಶೇಖರ್ ಎಚ್.ಟೆಕ್ಕಣ್ಣವರ್ (ಬೆಂ. ಕೇಂದ್ರ ಡಿಸಿಪಿ)
- ಸಾರಾ ಫಾತೀಮಾ (ಬೆಂ. ಪೂರ್ವ ಸಂಚಾರ ಡಿಸಿಪಿ)
- ಅನಿತಾ ಭೀಮಪ್ಪ ಹದ್ದಣವರ್ (ಬೆಂ. ಪಶ್ಚಿಮ ಸಂಚಾರಡಿಸಿಪಿ)
- ಕೆ.ವಿ.ಅಶೋಕ್ (ತುಮಕೂರು ಎಸ್ಪಿ)
- ಸೋನಾವಾನೆ ರಿಷಿಕೇಶ್ ಭಗವಾನ್ (ವಿಜಯಪುರ ಎಸ್‌ಪಿ)
- ಲೋಕೇಶ್ ಭರಮಪ್ಪ(ಮೈಸೂರಿನ ಪೊಲೀಸ್ ಅಕಾಡೆಮಿ ಎಸ್‌ಪಿ)
- ಆರ್.ಶ್ರೀನಿವಾಸ್‌ಗೌಡ (ಬೆಂಗಳೂರು ಸಿಸಿಬಿ ಡಿಸಿಪಿ 2)
- ಪಿ.ಕೃಷ್ಣಕಾಂತ್ (ಆಡಳಿತ ವಿಭಾಗದ ಎಐಜಿಪಿ)
- ವೈ.ಅಮರನಾಥ್ ರೆಡ್ಡಿ(ಬಾಗಲಕೋಟೆ ಎಸ್‌ಪಿ)
- ಹರಿರಾಮ್ ಶಂಕರ್ (ಗುಪ್ತಚರ ದಳದ ಎಸ್‌ಪಿ)
- ಅಡ್ಡೂರು ಶ್ರೀನಿವಾಸುಲು (ಕಲಬುರಗಿ ಎಸ್‌ಪಿ)
- ಅನ್ಶು ಕುಮಾರ್ (ಉಡುಪಿಯ ಕರಾವಳಿ ರಕ್ಷಣಾ ಪಡೆ ಎಸ್‌ಪಿ)
- ಕನ್ನಿಕಾ ಸಿಕ್ರಿವಾಲ್ (ಕಲಬುರಗಿ ಕಮಿಷನರೇಟ್ ಕಾನೂನು ಸುವ್ಯವಸ್ಥೆ ಡಿಸಿಪಿ)
- ಕುಶಾಲ್ ಚೌಕ್ಸಿ (ಬೆಂ. ವಿಧಿವಿಜ್ಞಾನ ಪ್ರಯೋಗಾಲಯದ ಜಂಟಿ ನಿರ್ದೇಶಕ)
- ರವೀಂದ್ರ ಕಾಶಿನಾಥ್ ಗಡದಿ (ಗುಪ್ತಚರ ದಳದ ಎಸ್‌ಪಿ)

## ಜೆಜೆಎಂ ಕಾಮಗಾರಿ ಗುಣಮಟ್ಟ ತನಿಖೆಗೆ ಸರಕಾರ ಆದೇಶ

**ಬೆಂಗಳೂರು:** ಜಲಜೀವನ ಮಿಷನ್ (ಜೆಜೆಎಂ) ಯೋಜನೆಯಡಿ ರಾಜ್ಯಾದ್ಯಂತ ನಲ್ಲಿ ಸಂಪರ್ಕ ಕಾಮಗಾರಿ ಗುಣಮಟ್ಟ ಕಳಪೆಯಾಗಿದ್ದು, ವ್ಯಾಪಕ ಅಕ್ರಮ ನಡೆದಿವೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಈ ಸಂಬಂಧ ಸ್ವತಂತ್ರ ಸಂಸ್ಥೆಯ (ಥರ್ಡ್ ಪಾರ್ಟಿ) ತನಿಖೆಗೆ ರಾಜ್ಯ ಸರಕಾರ ಆದೇಶಿಸಿದೆ. ಚೆನ್ನೈ ಮೂಲಕ ಬ್ಯೂರೋ ವೆರಿಟಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗೆ ಈ ಜವಾಬ್ದಾರಿ ವಹಿಸಲಾಗಿದ್ದು, ಈ ತನಿಖೆಗೆ 8.14 ಕೋಟಿ ರೂ. ವೆಚ್ಚವನ್ನು ಸರಕಾರ ಭರಿಸುತ್ತಿದೆ. ಈ ವೆಚ್ಚಕ್ಕೆ ಪಾರದರ್ಶಕತೆ ಕಾಯಿದೆಯಿಂದ ವಿನಾಯಿತಿ ನೀಡಲಾಗಿದೆ. ಈ ಸಂಸ್ಥೆಯಿಂದ ಗುಣಮಟ್ಟದ ಸೇವೆಯನ್ನು ದೃಢಪಡಿಸಿಕೊಳ್ಳುವ ಜವಾಬ್ದಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆಗೆ ನೀಡಲಾಗಿದೆ.

**ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ**
**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**
ಶ್ರೀ.ಕಂಠೀರವ ಕ್ರೀಡಾಂಗಣ, ಕಸ್ತೂರಬಾ ರಸ್ತೆ, ಗೇಟ್ ನಂ. 12, ಕೊಠಡಿ ಸಂಖ್ಯೆ: 17–18, ಬೆಂಗಳೂರು–560001.
ದೂ: 080–22239771 ಇ–ಮೇಲ್: adyssbangaloreurban12@gmail.com
ಸಂಖ್ಯೆ: DYES/2023-24/SEOD52 ದಿನಾಂಕ: 05–09–2023

**ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಗೆ ಸೇರಿದ ಆನೇಕಲ್ ತಾಲ್ಲೂಕು ಕ್ರೀಡಾಂಗಣ ಮತ್ತು ಹೊನಗನಹಟ್ಟಿ ಕ್ರೀಡಾಂಗಣಕ್ಕೆ ಎರಡು ಕಾವಲುಗಾರರು ಹಾಗೂ ಇಬ್ಬರು ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ನೀಡಲು ಹಾಗೂ ದೇವರಜೀವನಹಳ್ಳಿ ಕ್ರೀಡಾಂಗಣಕ್ಕೆ ಎರಡು ಕಾವಲುಗಾರರು ಹಾಗೂ ಒಬ್ಬರು ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ನೀಡಲು, ಜೆ.ಪಿ.ನಗರ ಕ್ರೀಡಾಂಗಣಕ್ಕೆ ಎರಡು ಕಾವಲುಗಾರರು ಮತ್ತು ಇಬ್ಬರು ಸ್ವಚ್ಛತಾ ಸಿಬ್ಬಂದಿ ಮತ್ತು ಸ್ವೀಪರ್ ಕಮ್ ಸ್ಕ್ಯಾವೆಂಜರ್ ಸೇವೆಯನ್ನು ಒಟ್ಟು 8 ಕಾವಲುಗಾರರು 6 ಸ್ವಚ್ಛತಾ ಸಿಬ್ಬಂದಿ ಮತು ಒಂದು ಸ್ವೀಪರ್ ಕಮ್ ಸ್ಕ್ಯಾವೆಂಜರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ https://www.eproc.karnataka.gov.in ದಿನಾಂಕ: 30.08.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರಿಂಗ್ ಮುಖಾಂತರ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16.09.2023 ಸಂಜೆ 4.00 ಗಂಟೆಯವರೆಗೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಾಖಲು ಮಾಡಬಹುದು.

ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.09.2023 ಬೆಳಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳಿಗೆ ಮೇಲಿನ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಖುದ್ದು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖೆ: 080–22239771 ಅಥವಾ ಮೊಬೈಲ್ ಸಂಖ್ಯೆ: 9480886545 ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ಬೆಂಗಳೂರು ನಗರ ಜಿಲ್ಲೆ
DIPR/CP/AAA/1171/2023-24

**ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ**
ಕೋಲಾರ ಡೇರಿ ಆವರಣ, ಎನ್.ಹೆಚ್.75, ಹುತ್ತೂರು (ಅಂಚೆ), ಕೋಲಾರ – 563 102
ಕೋಹಾಒ :ಆಡಳಿತ:ನೇರ ನೇಮಕಾತಿ:4087:2023–24 ದಿನಾಂಕ : 05.09.2023

**ನೇಮಕಾತಿ ಪ್ರಕಟಣೆ**

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ., ಕೋಲಾರ ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ 28 ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ : ಸಿಒ : 152 : ಸಿಸಿಬಿ : 2023 ದಿನಾಂಕ 18.07.2023 ರನ್ವಯ ಅನುಮೋದಿಸಿರುವಂತೆ **ಖಾಲಿ ಇರುವ ಹುದ್ದೆಗಳ ವಿವರಗಳು, ಸಂಖ್ಯೆ, ಮೀಸಲಾತಿ, ವಿದ್ಯಾರ್ಹತೆ, ವಯೋಮಿತಿ, ಅರ್ಜಿ ಶುಲ್ಕ, ಆಯ್ಕೆ ವಿಧಾನ** ಇತ್ಯಾದಿ ಹೆಚ್ಚಿನ ವಿವರಗಳನ್ನು **ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಅಧಿಕೃತ ವೆಬ್ ಸೈಟ್ www.komul.coop** ರಲ್ಲಿ ನೀಡಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ |
|---|---|---|---|
| 1. | ವಿಸ್ತರಣಾಧಿಕಾರಿ ದರ್ಜೆ–3<br>a. ನೇರ ನೇಮಕಾತಿ (ಸಾಮಾನ್ಯ ಕೋಟಾ)<br>b. MpCs ಕೋಟಾ | 33450–62600 | <br>08<br>08 |
| 2. | ಡೇರಿ ಸೂಪರ್ ವೈಸರ್ ದರ್ಜೆ–2 | 33450–62600 | 12 |

ಆನ್ ಲೈನ್ ಮೂಲಕ ಅರ್ಜಿಗಳನ್ನು **ದಿನಾಂಕ 06.09.2023 ರಿಂದ 05.10.2023** ರವರೆಗೆ ಸಲ್ಲಿಸಬಹುದಾಗಿರುತ್ತದೆ. ಈ ಸಂಬಂಧ ಒಕ್ಕೂಟದ ಅಧಿಕೃತ ವೆಬ್ ಸೈಟ್ **www.komul.coop** ನಲ್ಲಿ ಸಂಪೂರ್ಣ ವಿವರಗಳು ಲಭ್ಯವಿದ್ದು, ಆಸಕ್ತಿ ಉಳ್ಳ ಅಭ್ಯರ್ಥಿಗಳು ವೆಬ್‌ಸೈಟ್ ಗೆ ಭೇಟಿ ನೀಡಿ ಆನ್ ಲೈನ್ ಮೂಲಕ ನೇಮಕಾತಿ ಅರ್ಜಿ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಅಂಚೆ / ಕೊರಿಯರ್ / ಖುದ್ದಾಗಿ ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,

**PURAVANKARA LIMITED**
(CIN: L45200KA1986PLC051571)
Registered Office: No. 130/1, Ulsoor Road, Bangalore – 560 042
Tel: 080 2559 9000/4343999 Email: info@puravankara.com
Website: www.puravankara.com

**NOTICE OF THE 37TH ANNUAL GENERAL MEETING AND E-VOTING INFORMATION**

NOTICE is hereby given that the 37th Annual General Meeting (AGM) of Members of Puravankara Limited will be held on Friday, 29th September 2023, at 02:00 P.M (IST) through Video Conference (VC)/ Other Audio-Visual Means (OAVM) to transact the businesses as set out in the Notice convening AGM. The Company has already dispatched the Annual Report for the financial year 2022-23 along with the Notice convening AGM through electronic mode to the Shareholders whose email addresses are registered with the Company and/ or Depositories in accordance with the Circulars Issued by the Ministry of Corporate Affairs and Securities and Exchange Board of India. The Annual Report along with the Notice of the AGM is also available on the website of the Company at **https://www.puravankara.com/backend/assets/uploads/investors_reports/f2d483df9292c614f1fc6c2b99ec1e84.pdf** and on the website of National Securities Depository Limited (NSDL) at **http://www.evoting.nsdl.com**

**Remote e-voting and e-voting during AGM**

Pursuant to the provisions of Section 108 of the Companies Act, 2013 and Rule 20 of the Companies (Management and Administration) Rules. 2014 as amended and Regulation 44 of the Securities and Exchange Board of India (Listing Obligations and Disclosure Requirements) Regulations. 2015. The Shareholders are provided with the facility to cast their votes on all resolutions as set forth in the Notice convening the AGM using electronic voting system ('Remote e-voting') provided by NDSL. The voting rights of Shareholders shall be in proportion to the equity shares held by them in the paid-up equity share capital of the Company as on Friday, 22 September 2023 ('cut-off date').

The remote e-voting period commences on Tuesday, 26th September 2023 at 9.00 a.m. IST and will end on Thursday, 28th September 2023 at 5.00 p.m. IST. During this period, the Shareholders may cast their vote electronically. The remote e-voting module shall be disabled by NDSL thereafter. Those Shareholders who shall be present in the AGM through VC/OAVM facility and had not cast their votes on the Resolutions through remote e-voting and are otherwise not barred from doing so, shall be eligible to vote through e-voting system during the AGM.

The Shareholders who have cast their votes by remote e-voting prior to the AGM may also attend/participate in the AGM through VC/OAVM but shall not be entitled to cast their votes again.

Any person, who acquires shares of the Company and becomes a Shareholder of the Company after the Notice has been sent electronically by the Company, and holds shares as on the cut-off date; may obtain the login ID and password by sending a request to NSDL at **evoting@nsdl.co.in**. However, If he/she is already registered with NDSL for remote e-voting then he/she can use his/her existing User ID and password for casting the votes.

In case of any queries, please refer to the Frequently Asked Questions (FAQs) for members and the e-voting user manual for members available in the 'Downloads' section of **https://www.evoting.nsdl.com**. You can also mail your queries to NSDL by sending an email to **evoting@nsdl.co.in**., or call on toll free no.: 022 - 4886 7000 and 022 - 2499 7000.

The details of the AGM are available on the website of the Company at **https://www.puravankara.com/backend/assets/uploads/investors_reports/f2d483df9292c614f1fc6c2b99ec1e84.pdf**. NSDL at **evoting@nsdl.co.in**, BSE Limited at www.bseindia.com and National Stock Exchange of India Limited at **www.nseindia.com**.

For Puravankara Limited
Sd/-
Date: 05.09.2023 (Sudip Chatterjee)
Place: Bangalore Company Secretary and Compliance Officer

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ–ಟಿಇಸಿ ವಿಭಾಗ, ಮೊದಲನೇ ಮಹಡಿ, ಅನೆಕ್ಸ್–3 ಕಟ್ಟಡ, ನ.ರಾ.ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ/ರಮೂಸೌ/ಟಿಇಸಿ/ಟೆಂಡರ್/05/2023–24 ದಿನಾಂಕ: 05–09–2023

**ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)**

(ಏಕ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟಿಇಸಿ ವಿಭಾಗ, ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬೃಬೆಂಮಪಾ) ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಯೋಜನೆಗಳ ಸ್ಕೈ ವಾಕ್ ನಿರ್ವಹಣೆಗಾಗಿ ಪ್ರಸ್ತಾವನೆಯನ್ನು (ತಾಂತ್ರಿಕ & ಆರ್ಥಿಕ) ಆಹ್ವಾನಿಸಿದ್ದಾರೆ.

| ಕ್ರಮ ಸಂಖ್ಯೆ | ಯೋಜನೆ ಹೆಸರು | ಇಎಂಡಿ (ರೂ.ಗಳಲ್ಲಿ) |
|---|---|---|
| 1. | ಲಕ್ಕಸಂದ್ರ, ಜಕ್ಕಸಂದ್ರ ಮತ್ತು ಸೇಂಟ್ ಜಾನ್ ಆಸ್ಪತ್ರೆಗಳಲ್ಲಿರುವ ಸ್ಕೈ ವಾಕ್‌ಗಳ ನಿರ್ವಹಣೆ (01 ವರ್ಷಕ್ಕಾಗಿ) | 44,680/– |

**ವೇಳಾ ಪಟ್ಟಿ :** 1) ಆರ್‌ಎಫ್‌ಪಿ ದಾಖಲೆಗಳು 08–09–2023 ರಿಂದ ಲಭ್ಯವಿರುವುದು. 2) ಬಿಡ್ ಪೂರ್ವ ಸಭೆ ದಿನಾಂಕ 14–09–2023 ರಂದು 15.30 ಗಂಟೆಯವರೆಗೆ. 3) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 22–09–2023 ರಂದು 16.00 ಗಂಟೆಯವರೆಗೆ. 4) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ 25.09.2023 ರಂದು 11:00 ಗಂಟೆಗೆ. 5) ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ತಾಂತ್ರಿಕ ಪ್ರಸ್ತಾವನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅನುಮತಿ ಪಡೆದ ನಂತರ

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟಿಇಸಿ ವಿಭಾಗ

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

**ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ**
**2023–24ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ**

ಅಲ್ಪಸಂಖ್ಯಾತರ ನಿರ್ದೇಶನಾಲಯ – ಕರ್ನಾಟಕ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಪ್ರಕಟಿಸಿದೆ.

**ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆ**

**ಆನ್‌ಲೈನ್ ಅಪ್ಲಿಕೇಶನ್**

2023–24ರ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ವಿದ್ಯಾವಂತ ನಿರುದ್ಯೋಗಿ ಯುವಕ/ ಯುವತಿಯರಿಗೆ ಬೆಂಗಳೂರಿನಲ್ಲಿ ಸ್ಟೈಫಂಡ್ ಮೂಲಕ ಊಟ–ವಸತಿ ಸೌಲಭ್ಯದೊಂದಿಗೆ ವಿವಿಧ ಕ್ಷೇತ್ರಗಳ ಕೌಶಲ್ಯ ತರಬೇತಿಗಾಗಿ ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಹತೆ**

- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ).
- ಎಲ್ಲಾ ಮೂಲಗಳಿಂದ ಅಭ್ಯರ್ಥಿಯ ಪಾಲಕರ/ಪೋಷಕರ ವಾರ್ಷಿಕ ಆದಾಯವು ರೂ.8.00 ಲಕ್ಷಗಳನ್ನು ಮೀರಬಾರದು.
- ಅಭ್ಯರ್ಥಿಯ ವಯೋಮಿತಿ 16 ರಿಂದ 35 ವರ್ಷಗಳು ಮೀರಿರಬಾರದು.
- ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭ್ಯರ್ಥಿಗಳಾಗಿರಬೇಕು.

**ಕೊನೆಯ ದಿನಾಂಕ**

**ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16/09/2023**

**ಅರ್ಜಿದಾರರಿಗೆ ಸೂಚನೆಗಳು**

- ಅರ್ಜಿದಾರರು https://dom.karnataka.gov.in. ಈ ಲಿಂಕ್ ಮೂಲಕ ಆನ್‌ಲೈನ್‌ನಲ್ಲಿ "2023–24ನೇ ಸಾಲಿನ ಕೌಶಲ್ಯ ತರಬೇತಿಗೆ ಅರ್ಜಿ" (ಕ್ಲಿಕ್ ಮಾಡಿ) ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ .
- ರಾಮನಗರ ಜಿಲ್ಲೆ– ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ–7259306155.
- ದಕ್ಷಿಣ ಕನ್ನಡ ಜಿಲ್ಲೆ – ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ–9449006285.
- ಬೆಳಗಾವಿ ಜಿಲ್ಲೆ– ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – 8197705896.
- ದಾವಣಗೆರೆ ಜಿಲ್ಲೆ– ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – 9886635499
- ಕಲಬುರಗಿ ಜಿಲ್ಲೆ – ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ – 9449161217.

ಸಹಿ/–
ನಿರ್ದೇಶಕರು,
DIPR/CP/1185/Zen/2023-24 ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.

**ನೈಋತ್ಯ ರೈಲ್ವೆ** G20
ಟೆಂಡರ್ ಸೂಚನೆ ಸಂ. LastMile_Railnet_AllDept
ದಿನಾಂಕ: 30.08.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರಣೆ | ಅಂದಾಜು ಮೌಲ್ಯ |
|---|---|
| ಧರ್ಮಾವರಂ, ಧರ್ಮಪುರಿ ಮತ್ತು ಮೈಸೂರು ವಿಭಾಗದಲ್ಲಿ ಪ್ರಮುಖ ವೇ ಸೈಡ್ ಸ್ಟೇಷನ್‌ಗಳು, ಪಿಡಬ್ಲ್ಯೂಐ ಕಚೇರಿಗಳು ಮತ್ತು ಡಿಪೋಗಳು, ಸ್ಟೇಷನ್ ಮ್ಯಾನೇಜರ್‌ಗಳು, ಸಿ & ಡಬ್ಲ್ಯೂ ಶೆಡ್‌ಗಳು, ಆರ್‌ಪಿಎಫ್ ಪೋಸ್ಟ್‌ಗಳು ಮತ್ತು ಔಟ್‌ಪೋಸ್ಟ್‌ಗಳು, ಎಲ್ಲಾ ಇಲಾಖೆಯ ಎಸ್ ಎಸ್ ಇ ಕಚೇರಿಗಳು ಇತ್ಯಾದಿಗಳಿಗೆ ರೈಲ್‌ನೆಟ್ ನೆಟ್‌ವರ್ಕ್ ಅನ್ನು ವಿಸ್ತರಿಸಲು ಲಾಸ್ಟ್ ಮೈಲ್ ಸಂಪರ್ಕವನ್ನು ಒದಗಿಸುವುದು. | ರೂ. 1,33,52,702.35 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22–09–2023, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನಿಯರ್ ಬೆಂಗಳೂರು
PUB/351/AAV/PRB/SWR/2023-24
S.W.Railways SWRRLY SWRRLY

**ನೈಋತ್ಯ ರೈಲ್ವೆ** G20
ಟೆಂಡರ್ ಸೂಚನೆ ಸಂ. HE-TRD-2023-24-OT-15
ದಿನಾಂಕ: 31.08.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರಣೆ | ಅಂದಾಜು ಮೌಲ್ಯ |
|---|---|
| 1 ವರ್ಷದ ಅವಧಿಗೆ ಲೋಂಡಾ (ಹೊರತುಪಡಿಸಿ) – ಬೆಳಗಾವಿ (ಸೇರಿದಂತೆ) ವಿಭಾಗ ಮತ್ತು ಹುಬ್ಬಳ್ಳಿ (ಹೊರತುಪಡಿಸಿ) – ಕರಜ್‌ಗಿ (ಸೇರಿದಂತೆ) ವಿಭಾಗದಲ್ಲಿ ಟಿಆರ್‌ಡಿ ನಿರ್ವಹಣೆ ಮತ್ತು ಸ್ಥಗಿತ ಚಟುವಟಿಕೆಗಳ ಹೊರಗುತ್ತಿಗೆ. | ರೂ. 1,73,53,596/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28–09–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ ಟಿಆರ್‌ಡಿ/ಹುಬ್ಬಳ್ಳಿ
PUB/355/AAV/PRB/SWR/2023-24
S.W.Railways SWRRLY SWRRLY

**ನೈಋತ್ಯ ರೈಲ್ವೆ** G20
ಟೆಂಡರ್ ಸೂಚನೆ ಸಂ. Y/E.29/2023-24/30
ದಿನಾಂಕ: 29.08.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕಾಮಗಾರಿಯ ವಿವರಣೆ | ಅಂದಾಜು ಮೌಲ್ಯ |
|---|---|
| (ಮರು ಟೆಂಡರ್) ಮೈಸೂರು ವಿಭಾಗದ ರೈಲ್ವೇ ಕಾಲೋನಿಗಳಲ್ಲಿ ಇಲ್ಯೂಮಿನೇಷನ್‌ನ ಸುಧಾರಣೆಗಳು. | ರೂ. 51,04,480/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20–09–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ ಮೈಸೂರು
PUB/349/AAV/PRB/SWR/2023-24
S.W.Railways SWRRLY SWRRLY

**ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ**
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.
ಸಂ: ಬಿಐಎಎಪಿಎ/ಟಿಪಿ/ಭೂಉಬ/20/2023–24/1199 ದಿನಾಂಕ: 01.09.2023

**ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗುಂ | ಮಹಾಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|---|---|---|
| 1 | ಶ್ರೀ ಕೃಷ್ಣಪ್ಪ ಬಿನ್ ಲೇ॥ ಸೊಣ್ಣಪ್ಪ, ಶ್ರೀ ನಂಜಪ್ಪ ಬಿನ್ ಲೇ॥ ಸೊಣ್ಣಪ್ಪ, ಶ್ರೀ ಎಸ್. ನಾರಾಯಣಪ್ಪ ಬಿನ್ ಲೇ॥ ಸೊಣ್ಣಪ್ಪ, ಶ್ರೀ ಶಿವಣ್ಣ ಬಿನ್ ಲೇ॥ ಸೊಣ್ಣಪ್ಪ | ಯಲಹಂಕ | ಜಾಲ | ಕುದುರೆಗೆರೆ | 37 | 6–09 | ವ್ಯವಸಾಯ | ವಸತಿ |
| | ಶ್ರೀ ಹನುಮಂತರಾಯಪ್ಪ, ಶ್ರೀ ರಾಜಣ್ಣ ಬಿನ್ ಕೆಂಪಯ್ಯ | ಯಲಹಂಕ | ಜಾಲ | ಕುದುರೆಗೆರೆ | 37 | 1–15 | ವ್ಯವಸಾಯ | ವಸತಿ |
| 2 | ಶ್ರೀ ಕೆ.ಎನ್. ಪಟಾಲಪ್ಪ ಬಿನ್ ಲೇ॥ ನಂಜಪ್ಪ | ಯಲಹಂಕ | ಜಾಲ | ಕುದುರೆಗೆರೆ | 39 | 1–2.08 | ವ್ಯವಸಾಯ | ವಸತಿ |
| | ಶ್ರೀ ಕೆ.ಎನ್. ರಾಮಾಂಜಿನಪ್ಪ ಬಿನ್ ಲೇ॥ ನಂಜಪ್ಪ | ಯಲಹಂಕ | ಜಾಲ | ಕುದುರೆಗೆರೆ | 39 | 1–21.08 | ವ್ಯವಸಾಯ | ವಸತಿ |
| 3 | ಶ್ರೀಮತಿ ಮುನಿತಾಯಮ್ಮ ಕೋಂ ಲೇ॥ ಕೃಷ್ಣಪ್ಪ | ಯಲಹಂಕ | ಜಾಲ | ಕುದುರೆಗೆರೆ | 31/5 | 1–6.08 | ವ್ಯವಸಾಯ | ವಸತಿ |
| 4 | ಶ್ರೀಮತಿ ರತ್ನಮ್ಮ ಕೋಂ ಕೆ.ಎಂ. ನಾಗರಾಜ್ | ಯಲಹಂಕ | ಜಾಲ | ಕುದುರೆಗೆರೆ | 43/1 | 0–32 | ವ್ಯವಸಾಯ | ವಸತಿ |
| 5 | ಶ್ರೀ ಚನ್ನಪ್ಪ ಬಿನ್ ಕೃಷ್ಣಪ್ಪ | ಯಲಹಂಕ | ಜಾಲ | ಕುದುರೆಗೆರೆ | 56/2 | 0–06 | ವ್ಯವಸಾಯ | ವಸತಿ |
| 6 | ಶ್ರೀ ಮೇಕಪತಿ ಅಭಿನವರೆಡ್ಡಿ ಬಿನ್ ಎಂ. ರಾಜಗೋಪಾಲರೆಡ್ಡಿ | ಯಲಹಂಕ | ಜಾಲ | ಕುದುರೆಗೆರೆ | 56/4 | 0–06 | ವ್ಯವಸಾಯ | ವಸತಿ |
| 7 | ಶ್ರೀ ಮುನಿಯಪ್ಪ ಉರುಫ್ ಹೊಸಮುನಿಯಪ್ಪ ಬಿನ್ ಲೇ॥ ಮುನಿಅಕ್ಕಯ್ಯಮ್ಮ | ಯಲಹಂಕ | ಜಾಲ | ಕುದುರೆಗೆರೆ | 56/6 | 0–14 | ವ್ಯವಸಾಯ | ವಸತಿ |
| 8 | | ಯಲಹಂಕ | ಜಾಲ | ಕುದುರೆಗೆರೆ | 56/11 | 0–16 | ವ್ಯವಸಾಯ | ವಸತಿ |
| 9 | ಶ್ರೀ ಮಧುಸೂಧನ ರೆಡ್ಡಿ ಬಿನ್ ಪಿ. ಬಲರಾಮಿರೆಡ್ಡಿ | ಯಲಹಂಕ | ಜಾಲ | ಕುದುರೆಗೆರೆ | 56/9 | 0–30 | ವ್ಯವಸಾಯ | ವಸತಿ |
| 10 | ಶ್ರೀ ಆಂಥೋಣಿ ರಾಜ್ ಸಿ. ಬಿನ್ ಚಿನ್ನಪ್ಪ | ಯಲಹಂಕ | ಜಾಲ | ಕುದುರೆಗೆರೆ | 56/10 | 0–06 | ವ್ಯವಸಾಯ | ವಸತಿ |

**ಷರಾ:–** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ವಾಸಾಸಂಇ/ವಾಪ್ರ/ಎಎಎ/1176/2023–24